**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 1/2023 ಸಿ.ಡಬ್ಲೂ.1 ಪಿ.ಡಬ್ಲೂ.1

ದಿನಾಂಕ 08-01-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಂದುವರೆದು ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಮ್ಮ ಅತ್ತೆ ಚಾಸಾ 7 ರವರಿಗೆ ಹುಷಾರು ಇಲ್ಲದ ಕಾರಣ ನಾನು ಅವರ ಮನೆಗೆ ದಿಃ 28-06-2022 ರಂದು ಹೋಗಿದ್ದೇನು. ಶಿವಕಾಂತಬಾಯಿ ಗಂಡ ಅಂಬರಾಯ ಕಾಂಬಳೆರವರು ನನ್ನ ಅತ್ತೆ ಚಾಸಾ 7 ರವರಿಗೆ ನೋಟಿಸು ನೀಡಿ ರೂ. 12,00,000/- ಕೊಡಬೇಕಾಗುತ್ತದೆ ಅಂತಾ ತಿಳಿಸಿದ್ದರು. ನಾನು, ಚಾಸಾ 4 ಮತ್ತು ಚಾಸಾ 7 ರವರು ಊರಿನ ಪಂಚರ ಬಳಿ ನ್ಯಾಯ ಕೇಳಲು ಹೋದಾಗ ಚಾಸಾ 7 ರವರ ಗಂಡ ಜೀವಂತ ಇದ್ದಾಗ ಪಂಚಾಯತಿ ಆಗಬೇಕಾಗಿತ್ತು, ಆದರೆ ಆಗಿರುವುದಿಲ್ಲ ಆದಕಾರಣ ನಮಗೆ ಇದ್ದನ್ನು ಸರಿಪಡಿಸಲು ಆಗುವುದಿಲ್ಲ ನೀವು ಠಾಣೆಗೆ ಹೋಗಿ ಅಂತಾ ತಿಳಿಸಿರುತ್ತಾರೆ. ನಂತರ ನಾವು ಪೋಲಿಸ್ ಪಾಟೀಲರವರೊಂದಿಗೆ ವಿಚಾರಣೆ ಮಾಡಿ ಠಾಣೆಗೆ ಹೋಗಿರುತ್ತೇವೆ. ನಾವು ಶಿವಕಾಂತಬಾಯಿರವರ ಜೊತೆ ಮಾತನಾಡಿ ಏನು ಕೊಡುವುದಿದೆ ಅದನ್ನು ಕೊಡೋಣಾ 4 ಜನರ ಜೊತೆ ವಿಚಾರಣೆ ಮಾಡಿ ನ್ಯಾಯ ತೀರ್ಮಾನಿಸಿ ಹೊಲ ಉಳುಮೆ ಮಾಡು ಅಂತಾ ಹೇಳಿರುತ್ತೇನೆ. ಆದರೂ ಸಹಿತ ಅವರ ನಮ್ಮ ಮಾತನ್ನು ಕೇಳಿದೆ ಹೊಲದಲ್ಲಿ ಉಳುಮೆ ಮಾಡಿದ ಕಾರಣ ನಾವು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ದಿಃ 29-06-2022 ರಂದು ನಾನು ಹಣಮಂತ ದೇವರ ಗುಡಿಯ ಹತ್ತಿರ ಬರುವಾಗ ಆರೋಪಿತರು ನನಗೆ ಎರಡು ಬಾರಿ ಎಂದರೆ ಗುಡಿಯ ದಾರಿಯಲ್ಲಿ ಮತ್ತು ಗುಡಿಯ ಮುಂದೆ ಹೊಡೆದಿರುತ್ತಾರೆ. 2 ನೇ ಆರೋಪಿಯು ನನ್ನನ್ನು ಹಿಡಿದುಕೊಂಡಿದ್ದು 1ನೇ ಆರೋಪಿ ಕಟ್ಟಿಗೆಯನ್ನು ತೆಗೆದಕೊಂಡು ಎಡಭುಜದ ಮೇಲೆ, ಬೆನ್ನ ಮೇಲೆ, ಮೊಣಕಾಲ ಕೆಳಗೆ ಎಲುಬು ಮೂರಿದಿರುತ್ತದೆ. ಏ ರಂಡಿ ಮಗನೇ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿ ನಂತರ 2 ನೇ ಆರೋಪಿ ಚಾಸಾ 4 ರವರಿಗೆ ಏ ರಂಡಿ ನೀನು ಯಾಕೆ ಬರುತ್ತೀ ಅಂತಾ ಬೈದು ಸೀರೆ ಸೇರಗು ಎಳೆದು ಅವಮಾನ ಮಾಡಿರುತ್ತಾರೆ. ಅಲ್ಲೇ ಇದ್ದ ಕುದುಮುಡ ಗ್ರಾಮದ ಕಂಠೆಪ್ಪಾ ಬಿರಾದಾರವರು ಆರೋಪಿತರ ಕೈಯಿಂದ ಕಲ್ಲನ್ನು ಕಸಿದುಕೊಂಡು ಯಾಕೆ ಜಗಳ ಮಾಡುತ್ತೀರಿ ಅಂತಾ ಹೇಳಿ ಅವರು ಮತ್ತು ಚಾಸಾ 5 ಮತ್ತು 6 ರವರು ಸೇರಿಕೊಂಡು ಜಗಳ ಬಿಡಿಸಿರುತ್ತಾರೆ. ಅವರ ಜೊತೆ ದೈಯಪ್ಪಾ ಸೀರಸಿ ಅನ್ನುವವರು ಇದ್ದರು. ಸದರಿ ಕಂಠೆಪ್ಪಾರವರು ಇವರನ್ನು ಇಲ್ಲಿಂದ ಕರೆದುಕೊಂಡು ಹೋಗಿ ಅಂತಾ ಹೇಳಿದ ಕಾರಣ ಆರೋಪಿತರು ನನಗೆ ಕಾಲಿನಿಂದ ಒದ್ದು ಇಲ್ಲಿಂದ ನಡೆ ಅಂತಾ ಹೇಳಿ ನನ್ನನ್ನು ಓಡಿಸಿಕೊಂಡು ಹಣಮಂತ ದೇವರ ಗುಡಿಯ ಹತ್ತಿರ ಕರೆದುಕೊಂಡು ಹೋಗುತ್ತಿದ್ದಾಗ ನನ್ನ ಕಾಲು ನೋವು ಆಗಿದೆ ಅಂತಾ ಹೇಳಿದರೂ ಕೂಡ 3 ನೇ ಆರೋಪಿ ನನಗೆ ಅವಾಚ್ಯವಾಗಿ ಬೈದು ಇಲ್ಲಿ ಯಾಕೆ ಊರಿಗೆ ಬರುತ್ತೀಯಾ ಅಂತಾ ಬೈದಿರುತ್ತಾಳೆ, ನಂತರ

ಆ್ಯಂಬುಲೇನ್ಸಗೆ ಕರೆ ಮಾಡಿ ಕರೆಸಿರುತ್ತೇವೆ, ನಾವು ಆ್ಯಂಬುಲೆನ್ಸ ವಾಹನದಲ್ಲಿ ಕುಳಿತುಕೊಂಡಾಗ ಅವರು ಪೋಲಿಸರಿಗೆ ತಿಳಿಸಿದ್ದು ಪೋಲಿಸರೂ ಸಹ ಬಂದಿರುತ್ತದೆ. ಮೊದಲು ಕಮಲಾಪೂರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪ್ರ.ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆ ಗಾಗಿ ಕಲಬುರಗಿಗೆ ಜಯದೇವ ಆಸ್ಪತ್ರೆಗೆ ಕಳುಹಿಸಿರುತ್ತಾರೆ. 4 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದು ನಂತರ ಉಮರ್ಗಾದ ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಜಯದೇವ ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಬಂದು ನನ್ನ ಹೇಳಿಕೆ ಪಡೆದುಕೊಂಡು ಹೋಗಿರುತ್ತಾರೆ.

ಸಾಕ್ಷಿಯು ದೂರಿನ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಒಂದು ಬಡಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 1 ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರಃ ವಕೀಲರಿಂದ: ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಆಲಿಸಿ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ